**ಸಾಕ್ಷಿಯನ್ನು ದಿಃ 18.11.2025 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ

ಈ ದಿನ ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ನಮೂದಿಸಿರುವ ಎಲ್ಲಾ ವಿಷಯಗಳು ಸರಿಯಾಗಿ ಮತ್ತು ಸತ್ಯವಾಗಿರುತ್ತವೆ. ಅದಕ್ಕೆ ನನ್ನ ಸಹಿ ಇರುತ್ತದೆ.

ಅರ್ಜಿದಾರರಿಗೆ ಸಂಬಂಧಿಸಿದ ಕೇಸ್ ಶೀಟನ್ನು ಹಾಜರುಪಡಿಸಿದ್ದು ಅದನ್ನು ನಿಪಿ. 10 ಎಂದು,

ಒಟ್ಟು 3 ಎಕ್ಸ್ ರೇ ಫಿಲಂಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ. 11 ಎಂದು,

ಹೊರರೋಗಿ ದಾಖಲೆಯನ್ನು ಹಾಜರು ಪಡಿಸಿದ್ದು ನಿಪಿ.12 ಎಂದು ಗುರುತಿಸಲಾಯಿತು.

**ಪಾಟೀ ಸವಾಲು – 2 ನೇ ಎದುರುದಾರರ ಪರ ಶ್ರೀ ಎಂ.ವಿ.ಜಿ ವಕೀಲರಿಂದ**

ಅಪಘಾತವನ್ನು ನಾನು ನೋಡಿಲ್ಲ, ಅಪಘಾತದ ಹಿನ್ನಲೆಯನ್ನು ಗಾಯಾಳು ಹೇಳಿದ್ದನ್ನು ಬರೆದಿದ್ದೇನೆ. ಮೊದಲಿಗೆ ವಿಕ್ರಮ ಆಸ್ಪತ್ರೆ ಹುಣಸೂರು ಮತ್ತು ಕೆ.ಆರ್ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಪಡೆದು ನಂತರ ಬಂದಿದ್ದಾರೆ. ಆ ಆಸ್ಪತ್ರೆಗಳಲ್ಲಿ ಯಾವ ರೀತಿ ಚಿಕಿತ್ಸೆ ಪಡೆದಿದ್ದಾರೆ ಎಂದು ನನಗೆ ಮಾಹಿತಿ ಇಲ್ಲ. ನಮ್ಮ ಆಸ್ಪತ್ರೆಯಲ್ಲಿ ಗಾಯಾಳುವನ್ನು ನಾನೇ ಪರೀಕ್ಷಿಸಿ ಶಸ್ತ್ರ ಚಿಕಿತ್ಸೆ ಮಾಡಿದ್ದೇನೆ. ಗಾಯಾಳು ದಿಃ 30.03.2023 ಕ್ಕೆ ದಾಖಲಾಗಿ ದಿಃ 03.04.2024 ಕ್ಕೆ ಬಿಡುಗಡೆ ಹೊಂದಿದ್ದಾರೆ. ಗಾಯಾಳುವಿಗೆ ಗುಣಮುಖರಾದ ಕಾರಣ ಬಿಡುಗಡೆಗೊಳಿಸಿದ್ದೇವೆ ಎಂದರೆ ಸರಿಯಲ್ಲ, ವಿಶ್ರಾಂತಿ ಪಡೆಯಲು ಸಲಹೆ ನೀಡಿ ಬಿಡುಗಡೆಗೊಳಿಸಿದ್ದೇನೆ. ಗಾಯಾಳು ವಿದ್ಯಾಭ್ಯಾಸ ಮುಂದುವರಿಸಿದ್ದಾರೋ ಇಲ್ಲವೋ ಗೊತ್ತಿಲ್ಲ. ಕೊನೆಯದಾಗಿ ಗಾಯಾಳುವನ್ನು ದಿಃ 04.04.2024 ರಂದು ಪರೀಕ್ಷಿಸಿದ್ದೇನೆ. ಗಾಯಾಳು ನ್ಯೂನತೆಯನ್ನು ನಿರ್ಧರಿಸಿಕೊಳ್ಳಲು ಬಂದಿದ್ದರು ಎಂದರೆ ಸರಿ. ಅಪಘಾತ ಆಗಿ ಎರಡು ವರ್ಷ ಆಗಿದೆ. ಗಾಯಾಳು ಚಿಕ್ಕ ವಯಸ್ಸಿನವನಾದ ಕಾರಣ ಫ್ರಾಕ್ಚರ್ ಸಾಮಾನ್ಯವಾಗಿ ಬೇಗನೇ ಕೂಡಿಕೊಳ್ಳುತ್ತದೆ ಎಂದರೆ ಸರಿ.

2. ಬಿಡುಗಡೆಯಾದ ನಂತರ ಗಾಯಾಳು ಹಲವುಬಾರಿ ಪರೀಕ್ಷೆಗೆ ಬಂದಿರುತ್ತಾರೆ ಆ ಬಗ್ಗೆ ದಾಖಲೆ ಗಾಯಾಳು ಬಳಿ ಇರುತ್ತದೆ. ಶಸ್ತ್ರ ಚಿಕಿತ್ಸೆಯ ನಂತರ ಫಿಜಿಯೋತೆರಫಿಗೆ ಸಲಹೆ ನೀಡಿಲ್ಲ. ಗಾಯಾಳು ಶಸ್ತ್ರ ಚಿಕಿತ್ಸೆ ನಂತರ ಸಂಪೂರ್ಣ ಗುಣಮುಖರಾಗಿದ್ದರು ಸಹ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯೂನತೆಯನ್ನು ನಾನು ಗೈಡ್ ಲೈನ್ಸ್ ಪ್ರಕಾರ ಲೆಕ್ಕಾಚಾರ ಮಾಡಿಲ್ಲ ಎಂದರೆ ಸರಿಯಲ್ಲ. ಗಾಯಾಳುವಿಗೆ ಇಂಪ್ಲಾಟ್ಸ್ ಹಾಕಿದ್ದು ಅದನ್ನು ಶಸ್ತ್ರ ಚಿಕಿತ್ಸೆ ಮೂಲಕ ತೆಗೆಯಲಾಗಿದೆ. ಯಾವ ದಿನಾಂಕದಂದು ತೆಗೆಯಲಾಗಿದೆ ಎಂಬ ಪ್ರಶ್ನೆಗೆ ಸಾಕ್ಷಿಯು non MLC case sheet ನಲ್ಲಿ ನಮೂದಿದ್ದು ದಿನಾಂಕ ನೆನಪಿಲ್ಲ ಎನ್ನುತ್ತಾರೆ. ಮುರಿತ ಆದ ಮೂಳೆ ಕೂಡಿಕೊಂಡಿದೆ ಎಂದರೆ ವಕ್ರವಾಗಿ ಕೂಡಿಕೊಂಡಿದೆ ಎನ್ನುತ್ತಾರೆ. ಗಾಯಾಳು ಸರಿಯಾಗಿ ಫಿಜಿಯೋತರೆಫಿ ಮಾಡಿಸಿಕೊಳ್ಳದೇ ಇರುವ ಕಾರಣ ವಕ್ರವಾಗಿ ಕೂಡಿಕೊಂಡಿದೆ ಎಂದರೆ ಸರಿಯಲ್ಲ. ಗಾಯಾಳುವಿಗೆ ಯಾವುದೇ ನ್ಯೂನತೆ ಇಲ್ಲದೇ ಇದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.
(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.